ಆ) ಶಿವಮೊಗ್ಗದ ದೇವಿ ಶುಗರ್ಸ್ ಕಾರ್ಖಾನೆಯ ಕಬ್ಬು ಬೆಳೆಗಾರರ ಮತ್ತು ಕಾರ್ಮಿಕರ ಹಿತರಕ್ಷಣೆಗೆ ಸರ್ಕಾರವು ತಲಾ ರೂ 118,81,324 86 ಗಳ ಎಸ್.ಬಿ ಎಂ ಬ್ಯಾಂಕಿನ ಸಾಲಕ್ಕೆ ಗ್ಯಾರಂಟಿ ನೀಡಿರುತ್ತದೆ ಈ ಪೈಕಿ ರೂ 1,18,36 233 62 ಕಾರ್ಮಿಕರಿಗೆ ಪಾವತಿಸಿರುತ್ತದೆ. ಹಾಗೆಯೇ ರೂ 115,09,888 00ಗಳನ್ನು ಕಬ್ಬು ಬೆಳೆಗಾರರಿಗೆ ಪಾವತಿಸಿರುತ್ತದೆ

ಈಗಾಗಲೇ ಮೇಲಿನ ಕಂಡಿಕೆಯಲ್ಲಿ ಉತ್ತರ ನೀಡಿರುತ್ತದೆ

ಇ) ಶಿವಮೊಗ್ಗ ಮತ್ತು ಭದ್ರಾವತಿ ತಾಲ್ಲೂಕ್‌ಗಳ ವ್ಯಾಪ್ತಿಯ ಕಬ್ಬು ಬೆಳೆಗಾರರ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಆ ಪ್ರದೇಶದಲ್ಲಿ ಬೆಳೆಯುವ ಕಬ್ಬನ್ನು ತಾತ್ಕಾಲಿಕವಾಗಿ ಭದ್ರಾವತಿಯ ಎಂ ಪಿ ಎಂ ಸಕ್ಕರೆ ಕಾರ್ಖಾನೆಗೆ ಸರಬರಾಜು ಮಾಡಲು ಸರ್ಕಾರವು ಅನುಮತಿ ನೀಡಿರುತ್ತದೆ

ಶಿವಮೊಗ್ಗ ತಾಲ್ಲೂಕಿನಲ್ಲಿ ನೂತನ ಪಶು ಆಸ್ಪತ್ರೆ ಹಾಗೂ ಔಷಧಿಗಳ ವಿವರ

225 (251) ಶ್ರೀ ಚಂದ್ರಶೇಖರಪ್ಪ ಹೆಚ್ ಎಂ (ಶಿವಮೊಗ್ಗ ಕ್ಷೇತ್ರ) ಮಾನ್ಯ ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶಿವಮೊಗ್ಗ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ನಗರ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿರುವ ಪಶುಗಳ ಸಮೀಕ್ಷೆ ನಡೆಸಲಾಗಿದೆಯೇ ಹಾಗೂ ಇವುಗಳ ಸಂಖ್ಯೆಗೆ ಅನುಗುಣವಾಗಿ ಪಶುಚಿಕಿತ್ಸಾಲಯ ಕೇಂದ್ರಗಳ ಅನುಕೂಲ ಕಲ್ಪಿಸಲಾಗಿದೆಯೇ? ಶಿವಮೊಗ್ಗ ನಗರದ ವಿದ್ಯಾನಗರದಲ್ಲಿ ಹೊಸ ಪಶು ಚಿಕಿತ್ಸಾ ಕೇಂದ್ರ ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ವಿವರ ನೀಡುವುದು?

ಆ) 1999 ರಿಂದ 2003 ರವರೆಗೆ ಸರ್ಕಾರದ ವತಿಯಿಂದ ಶಿವಮೊಗ್ಗ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಪಶು ಚಿಕಿತ್ಸಾ ಕೇಂದ್ರಕ್ಕೆ ಆಸ್ಪತ್ರೆಗಳಿಗೆ ಬಿಡುಗಡೆಗೊಳಿಸಲಾದ ಔಷಧಗಳ ಅನುದಾನದ ಮೊತ್ತವೆಷ್ಟು ವಿವರ ನೀಡುವುದು?

ಶ್ರೀ ಎಂ ಮಹಾದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು)

ಅ) ಸೆಪ್ಟೆಂಬರ್ – ಅಕ್ಟೋಬರ್ 2003 ರಲ್ಲಿ ನಡೆದ ಜಾನುವಾರು ಗಣತಿಯ ವಿವರಗಳನ್ನು ಅಂತಿಮಗೊಳಿಸಲಾಗುತ್ತಿದೆ 1997 ರ ಜಾನುವಾರುಗಳ ಗಣತಿ ಅಂಕಿಅಂಶಗಳ ಪ್ರಕಾರ ಶಿವಮೊಗ್ಗ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ನಗರ ಪ್ರದೇಶದಲ್ಲಿ 12650 ಮತ್ತು ಗ್ರಾಮಾಂತರ ಪ್ರದೇಶದಲ್ಲಿ 27115 ಜಾನುವಾರುಗಳು ಇರುತ್ತವೆ ಇದಕ್ಕ ಅನುಗುಣವಾಗಿ 8 ಪಶುವೈದ್ಯ ಸಂಸ್ಥೆಗಳ ಅವಶ್ಯಕತೆಯಿದ್ದು ಈ ಹಾಲಿ 9 ಪಶುವೈದ್ಯ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ

ಆ) ಶಿವಮೊಗ್ಗ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಪಶು ಆಸ್ಪತ್ರೆ–1 ಪಶುಚಿಕಿತ್ಸಾಲಯ–3 ಮತ್ತು ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳು–5 ಒಟ್ಟು 9 ಕೇಂದ್ರಗಳಿಗೆ ಈ ಕೆಳಕಂಡ ಔಷಧಿಯನ್ನು ವಿವಿಧ ಮೂಲಗಳಿಂದ ಸರಬರಾಜು ಮಾಡಲಾಗಿದೆ

ಕ್ರ ಸಂ	ವಿವರ	1999–2000	2000–2001	2001–2002	2002–2003
1	ಸರ್ಕಾರದಿಂದ	ಇಲ್ಲ	229482	205100	211216
2	ಜಿಲ್ಲಾ ಪಂಚಾಯತ್‌ನಿಂದ	73841	85113	91354	160830

1	2	3	4	5	6
3	ತಾಲ್ಲೂಕು ಪಂಚಾಯತ್‌ನಿಂದ	–	23060	18123	–
4	ಬರಪರಿಹಾರ	–	–	23008	41169
		73841	337655	337585	413215

* ದರಗುತ್ತಿಗೆ ನಿಗಧಿಯಾಗದೇ ಇದ್ದ ಕಾರಣ

ಪರಿಶಿಷ್ಟ ಜಾತಿ ವರ್ಗಗಳ ಅಭಿವೃದ್ಧಿ ನಿಗಮದ ವತಿಯಿಂದ ಹಮ್ಮಿಕೊಳ್ಳಲಾದ ಯೋಜನೆಗಳು

226 (252) ಶ್ರೀ ಚಂದ್ರಶೇಖರಪ್ಪ ಹೆಚ್ ಎಂ (ಶಿವಮೊಗ್ಗ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 1999 ರಿಂದ ಈವರೆಗೂ ಕರ್ನಾಟಕ ಪರಿಶಿಷ್ಟ ಜಾತಿ/ ವರ್ಗಗಳ ಅಭಿವೃದ್ಧಿ ನಿಗಮದಿಂದ ಶಿವಮೊಗ್ಗ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಹಮ್ಮಿಕೊಳ್ಳಲಾದ ವಿವಿಧ ಯೋಜನೆಗಳ ಫಲಾನುಭವಿಗಳ ಮತ್ತು ಯೋಜನಾ ವೆಚ್ಚದ ಬಗ್ಗೆ ವಿವರ ನೀಡುವುದು

ಆ) 2003–04 ನೇ ಸಾಲಿನಲ್ಲಿ ಮೇಲ್ಕಂಡ ನಿಗಮದಿಂದ ಹಮ್ಮಿಕೊಳ್ಳಲಾಗಿರುವ ಕ್ರಿಯಾ ಯೋಜನೆ ವಿವರಗಳನ್ನು ನೀಡುವುದು?

ಶ್ರೀ ಎ ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ) 1999ನೇ ಸಾಲಿನಿಂದ ಈವರೆಗೂ ನಿಗಮದಿಂದ ಶಿವಮೊಗ್ಗ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಈ ಕೆಳಕಂಡ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ ಫಲಾನುಭವಿಗಳ ಸಂಖ್ಯೆ ಮತ್ತು ವೆಚ್ಚದ ವಿವರಗಳನ್ನು ಅನುಬಂಧ–ಅ ರಲ್ಲಿ ಲಗತ್ತಿಸಿದೆ

ಆ) 2003–04ನೇ ಸಾಲಿನಲ್ಲಿ ನಿಗಮದಿಂದ ಶಿವಮೊಗ್ಗ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಹಮ್ಮಿಕೊಳ್ಳಲಾಗಿರುವ ಕ್ರಿಯಾ ಯೋಜನೆಯ ವಿವರ ಈ ಕೆಳಕಂಡಂತೆ ಇದೆ

(ರೂ ಲಕ್ಷಗಳಲ್ಲಿ)

ಕ್ರ ಸಂ	ಯೋಜನೆಯ ಹೆಸರು	ಭೌತಿಕ ಗುರಿ		ಆರ್ಥಿಕ ಗುರಿ	
		ಪ ಜಾ	ಪ ವ	ಪ ಜಾ	ಪ ವ
1	ಗಂಗಾ ಕಲ್ಯಾಣ ಯೋಜನೆ	00	02		2 53
2	ವೈಯಕ್ತಿಕ ನೀರಾವರಿ ಕೊಳವೆಬಾವಿ	17	01	17 00	1 00
3	ಭೂ ಒಡೆತನ ಯೋಜನೆ	05	02	1 50	0 60
4	ಸ್ವಯಂ ಉದ್ಯೋಗ ಯೋಜನೆ	30	05	3 00	0 50
5	ಐ.ಎಸ್ ಬಿ ಯೋಜನೆ	09	03	2 70	0 90
	ಒಟ್ಟು	61	13	24 20	5 53

ನೇರಸಾಲ ಯೋಜನೆಯಡಿ ಕ್ಷೇತ್ರವಾರು ಗುರಿಗಳನ್ನು ನಿಗದಿಪಡಿಸಿರುವುದಿಲ್ಲ ಜಿಲ್ಲಾವಾರು ಗುರಿ ನಿಗದಿಪಡಿಸಲಾಗಿದೆ